ಮತ್ತು ನಡವಳಿಕೆಗಳನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 8ನೇ ಆಗಸ್ಟ್ 2002ರಂದು ಯಾವುದೇ ತಿದ್ದುಪಡಿಗಳಿಲ್ಲದೇ ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ. (1) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ 2002

(2) ಕರ್ನಾಟಕ ಕಾರ್ಖಾನೆಗಳ (ತಿದ್ದುಪಡಿ) ವಿಧೇಯಕ 2002" ಈಗ shall we take up the Bills or not?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಇಲ್ಲಿರತಕ್ಕಂಥವುಗಳೆಲ್ಲಾ ಒರಿಜಿನಲ್ ಬಿಲ್ಸ್. ಇಲ್ಲಿಂದ ಇನಿಶಿಯೇಟ್ ಆಗಬೇಕು. ಅವು ಮೇಲ್ಮನೆಗೆ ಹೋಗಬೇಕಾಗುತ್ತದೆ. ಮೇಲ್ಮನೆ ಈಗಾಗಲೇ ಅವರು ಮುಂದಕ್ಕೆ ಹೋಗಿರುವುದರಿಂದ ಮಸೂದೆ ಪಾಸ್ ಮಾಡುವುದರಲ್ಲಿ ಏನೂ ಅರ್ಥವಿಲ್ಲ.

ಅಧ್ಯಕ್ಷರು : ಆಯಿತು ಬಿಡಿ. ಆಯಿತು.

20. ಸದನದ ಕಾರ್ಯಕಲಾಪಗಳಿಗೆ ಅಡ್ಡಿಯಾಗುವುದನು ತಪ್ಪಿಸಲು ನಿಯಮಾವಳಿಗಳ ರಚನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಹೇಳಿದ ವಿಚಾರಗಳಿಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಉತ್ತರ ಹೇಳಿಬಿಡುತ್ತೇನೆ. ತಮ್ಮ ಮತ್ತು ವೈ.ಕೆ. ರಾಮಯ್ಯನವರು ಹೇಳಿದ ವಿಷಯ ಮತ್ತು ವಿರೋಧ ಪಕ್ಷದ ನಾಯಕರಾದ ಶೆಟ್ಟರ್‌ರವರು ಮತ್ತು ಸಿಂಧ್ಯಾರವರು, ಆಡಳಿತ ಪಕ್ಷದಿಂದ ಖರ್ಗೆಯವರನ್ನು ಕರೆಸಿಕೊಂಡು ಸಂಜೆ 5.00 ಗಂಟೆಗೆ ನಾನು ಮಾತನಾಡಿದ್ದೇನೆ. ನಾನು ಇಲ್ಲಿಂದ 4.30ಗೆ ಎದ್ದು ಹೋದೆನಲ್ಲಾ, ಆಮೇಲೆ ಅವರನ್ನು ಕರೆಸಿಕೊಂಡು ಎಲ್ಲವನ್ನೂ ಮಾತನಾಡಿದೆ. ಅವರೇನು ಹೇಳಿದರು ಎಂದರೆ, ಸ್ವಾಮಿ ನಾವೇನು ಮಾಡೋಕಾಗುತ್ತೆ, ನಿಮ್ಮ ಪ್ರಿವಿಲೀಜ್, ಯಾವ ರೀತಿ ನೀವು ಅಥವಾ ಹಕ್ಕು ರೀತಿ ಇದು ಪ್ರಿವಿಲೀಜೋ ಅಥವಾ ಆಗುತ್ತೋ ಇಲ್ವೋ ಎನ್ನುವುದು ಒಂದು. ಏನು ಅವರನ್ನು ಮಾತನಾಡುವುದಕ್ಕೆ ಬಿಡಲಿಲ್ಲವಾ ಅದರ ಬಗ್ಗೆ: ಅದು ಒಂದು. ಎರಡನೆಯದಾಗಿ ತಾವು ಹೇಳಿದ್ದು, ಎರಡು ದಿವಸದಿಂದ ಒಂದು ಕೋಟಿ ರೂಪಾಯಿ ಖರ್ಚಾಗಿದೆ. ಇದನ್ನು ಯಾರು ತುಂಬಿಕೊಡುತ್ತಾರೆ ಎಂದು ಕೇಳಿದಿರಿ. ಇದರ ಬಗ್ಗೆ ಕೂಡ ನಾನು ಮಾತನಾಡಿದೆ. ಕಡೆಗೆ ಕನ್‌ಕ್ಲೂಶನ್‌ಗೆ ಏನು ಬರಲಾಯಿತು ಎಂದರೆ ಇಂಥ ರೀತಿ ಇನ್ನು ಮುಂದಕ್ಕೆ ಆಗದೇ ಇರುವ ಹಾಗೆ ನೋಡಿಕೊಳ್ಳುವುದಕ್ಕೋಸ್ಕರ ಈಗೇನು ನಾವು ರೂಲ್ಸ್ ಕಮಿಟಿಯನ್ನು ಮಾಡಿದ್ದೇವಲ್ಲಾ ಅಲ್ಲಿಯೇ ರೂಲ್ಸ್ ಅನ್ನೇ ಅಮೆಂಡ್ ಮಾಡುವುದು ಬೆಟರ್ ಎಂದು ಹೇಳಿ ತೀರ್ಮಾನವಾಯಿತು. ಆ ಮೀಟಿಂಗ್‌ನ್ನು ಬೇಕಾದರೆ ಒಂದುವಾರದಲ್ಲಿಯೇ ಅಥವಾ ಎಂಟತ್ತು ದಿವಸದಲ್ಲಿಯೇ ಕರೆಯುತ್ತೇನೆ. ರೂಲ್‌ನಲ್ಲಿಯೇ ಅಮೆಂಡ್ ಮಾಡಬೇಕಾಗಿದೆ. ನನಗೇ ಹಕ್ಕಿದೆ, ಆದರೂ ಕೂಡ ಆ ಹಕ್ಕನ್ನು ನಾನು ಚಲಾಯಿಸಬೇಕಾದರೆ, ಎಸ್.ಎಶ್. ಪಾಟೀಲರೆ ನಾಳೆ ನೀವೇ ಹೇಳ್ತೀರಿ, ಯಾವ ರೂಲ್ಸ್ ಪ್ರಕಾರ ನೀವು ಹೀಗೆ ಮಾಡ್ತೀರಿ ಸ್ವಾಮಿ ಎಂದು ಕೇಳುತ್ತೀರಿ. ಅವೆಲ್ಲಾ ಏಕೆ? ರೂಲ್‌ನಲ್ಲಿಯೇ ಅಮೆಂಡ್ ಮಾಡಿಬಿಟ್ಟರೆ ಯಾವ ತಂಟೆಯೂ ಇರುವುದಿಲ್ಲ. ಇದರಲ್ಲಿ ಎರಡು ವಿಷಯಗಳು ಬರುತ್ತವೆ. ಈ ರೀತಿ ವಿನಾಕಾರಣ ಸಭೆ ಮುಂದೆ ಹೋಗುವಂತೆ ಮಾಡಿ ಗಲಾಟೆಗಳು

ಮಾಡುವುದು ಒಂದು. ಎರಡನೆಯದಾಗಿ ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೇ ಬಿಡದೇ ಇರುವುದು, ಈ ರೀತಿಯ ಎರಡೂ ವಿಷಯಗಳು ರೂಲ್ಸ್‌ನಲ್ಲಿ ಸೇರಿಸುವುದು ಎಂದು ತೀರ್ಮಾನವಾಯಿತು. That is the final decision.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ರೂಲ್ಸ್‌ನಲ್ಲಿ ಎಲ್ಲಾ ಇದೆ. ಆದರೆ ನಾವು ನಡೆದುಕೊಳ್ಳುವ ರೀತಿ ಮೇಲೆ ಹೋಗುತ್ತದೆ.

ಅಧ್ಯಕ್ಷರು : ಅದು ಹೇಳಿ. ನಾವೆಲ್ಲರೂ ನಡೆದುಕೊಳ್ಳುವ ರೀತಿ ಮೇಲೆ ಹೇಗುತ್ತದಷ್ಟೆ.

ಶ್ರೀ ಎಸ್.ಎಸ್. ಪಾಟೀಲ್ : ಆಡಳಿತ ಪಕ್ಷದ ನಾಯಕರು ಇದ್ದಾರೆ, ವಿರೋಧ ಪಕ್ಷದ ನಾಯಕರೂ ಇದ್ದಾರೆ. ಈಗ ಎರಡೂ ದಿವಸಗಳು ನಡೆದಂಥ ವ್ಯವಹಾರದಲ್ಲಿ ಇವರಿಬ್ಬರದೂ ತಪ್ಪು ಇದೆ. ಇವರಿಬ್ಬರದೂ ತಪ್ಪಿದೆ.

ಶ್ರೀ ಜಗದೀಶ್ ಶೆಟ್ಟರ್ : ಇದನ್ನು ನಾವು ಒಪ್ಪುವುದಿಲ್ಲ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಆದಕಾರಣ ನಮ್ಮ ನಮ್ಮ ನಾಯಕರೂ ಮತ್ತು ನಾವೆಲ್ಲಾ ಸೇರಿ ಬಂದೋಬಸ್ತ್ ಮಾಡಬೇಕಾಗುತ್ತದೆ. ಏಕೆಂದರೆ ಅಸೆಂಬ್ಲಿಯಲ್ಲಿ ತಮ್ಮ ಘನತೆ ಗೌರವ ಉಳಿದಿಲ್ಲ. ನನ್ನ ಪ್ರಕಾರ ಕೇಳಿದರೆ. ಆದಕಾರಣ ಅಧ್ಯಕ್ಷರೆ, ನಾವೆಲ್ಲರೂ ಕೂಡಿಕೊಂಡು ಮಾತನಾಡಿ ಮುಂದೆ ಈ ರೀತಿ ಆಗದೇ ಇರುವ ಹಾಗೆ ಏನು ಮಾಡಬೇಕು ಎಂಬುದಕ್ಕೆ ಒಂದು ತೀರ್ಮಾನವಾಗಬೇಕಾಗಿದೆ.

ಅಧ್ಯಕ್ಷರು : ಅದನ್ನು ನಾನು ಒಪ್ಪುತ್ತೇನೆ. ಪುನಃ ಇನ್ನೊಂದು ಸಲ ಕರೆಸಿ ನಾನು ಮಾತನಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ನಿನ್ನೆಯೆಲ್ಲಾ ಸುಮ್ಮನೆ ಕಳೆದು ಈಗ ಬಿಲ್‌ಗಳು ಉಳಿಯುವ ಹಾಗೆ ಆಯಿತು. ಆಮೇಲೆ ನಾನು ಮಾತನಾಡುವುದಕ್ಕೆ ಹೋದರೆ ಶಿವಾನಂದ ಪಾಟೀಲರು ಮಾತನಾಡಬೇಡಿ ಎಂದು ಹೇಳುತ್ತಾರೆ. ಬೆಳೆ ವಿಮೆ ವಿಚಾರದಲ್ಲಿ ಚರ್ಚೆಗೆ ಅರ್ಧ ಗಂಟೆ ಕಾಲಾವಧಿ ಅವಕಾಶಕ್ಕಾಗಿ ಮನವಿ ಕೊಟ್ಟಿದ್ದೆ. ಕೃಷಿ ಸಚಿವರಿಗೂ ಗೊತ್ತು. ನೀವು ಕೇಳಿ ಅವರನ್ನು. ಅಜೆಂಡಾದಲ್ಲೂ ಹಾಕಿದೆ. ಇವೊತ್ತು ಚರ್ಚೆಯೇ ಇಲ್ಲ ಅದಕ್ಕೆ. ಪಾಪ ಕೃಷಿ ಸಚಿವರೇ ಹೇಳುತ್ತಾರೆ, ಏನೇನೂ ಅಂಕಿ ಸಂಖ್ಯೆ ಇಲ್ಲ ಪಾಟೀಲರೆ, ಏನ್ ಮಾಡ್ಲಿ ನಾನು ಎಂದು ಹೇಳುತ್ತಾರೆ. ಇದು ರೈತನಿಗಾದಂಥ ಅನ್ಯಾಯ ಈ ಬಗ್ಗೆ ಚರ್ಚೆ ಇಲ್ಲಿ ನಡೆಯಲೇ ಇಲ್ಲ. ಇದು ಎಲ್ಲಾ ಶಾಸಕರಿಗೂ ಸಂಬಂಧ ಇರುವಂಥ ವಿಚಾರವೇ ಆಗಿದೆ. ಈಗ ಊರಿಗೆ ಹೋದ ಕೂಡಲೇ ಎಲ್ಲರಿಗೂ ರೈತರು ಬೈಯ್ಯುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಉತ್ತರ ಕೊಡುವುದಕ್ಕೆ ಬರುವುದಿಲ್ಲ, ಸಬ್‌ಜ್ಯುಡೀಸ್ ಆಗುತ್ತದೆ ಎಂದು ಹೇಳಿದರು. ಮಂತ್ರಿಗಳು ಕೊಡುವಂಥ ಉತ್ತರವನ್ನು ಶಾಸಕರನ್ನು ಕೊಟ್ಟರು.

ಅಧ್ಯಕ್ಷರು : ಶಿವಾನಂದ ಪಾಟೀಲರು ಮಾತನಾಡಿದ್ದರಿಂದ, ಆ ಭಾಗದಿಂದ ಬಂದಿರತಕ್ಕ ಶಾಸಕರುಗಳಿಗೂ ಸಹ ಮಾತನಾಡಲು- I have permitted them.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಕಾನೂನು ಸಚಿವರು ಇದು ಸಬ್ ಜ್ಯುಡೀಸ್ ಆಗುತ್ತದೆಂದು ಹೇಳಿದರು. ಶಿವಾನಂದ ಪಾಟೀಲರು ಏನು ಹೇಳುವುದಕ್ಕೆ ಹೊರಟಿದ್ದರು ಎಂದರೆ ಮಹಾರಾಷ್ಟ್ರ

ಸರ್ಕಾರ ಎಕ್ಸ್‌ಸ್ ನೀರನ್ನು ತೆಗೆದುಕೊಳ್ಳುತ್ತಿದೆ ಎಂದಿದ್ದಾರೆ. ಅದರ ಬಗ್ಗೆ ಸರ್ಕಾರ ಹೇಳಬೇಕಾಗಿತ್ತು. ರೈತರಿಗೆ ಏನು ತೊಂದರೆಯಾಗಿದೆ. ಪರಿಸ್ಥಿತಿ ಏನಿದೆ ಎಂಬ ಬಗ್ಗೆ ಹೇಳುವುದಕ್ಕೆ ಸರ್ಕಾರ ತಯಾರಿಲ್ಲ. ಸರ್ಕಾರ ಈ ರೀತಿ ತಪ್ಪು ಮಾಡುವಂಥ ಕೆಲಸವನ್ನು ಮಾಡುತ್ತಿದೆ. ರೈತರದ್ದು ಬಂದಾಗ, ಬರಗಾಲ ವಿಚಾರ ಬಂದಾಗ, ರೈತರಿಗೆ ಅನ್ಯಾಯ ಆದಾಗ ಅಥವಾ ನೀರು ಎಕ್ಸ್‌ಸ್ ಆದಾಗ....

ಶ್ರೀ ಡಿ.ಬಿ.ಚಂದ್ರೇಗೌಡ : ಈ ರೀತಿ ಸಭೆ ಮುಗಿಯುವ ಸಮಯದಲ್ಲಿ ಇಂಥ ಆಪಾದನೆಗಳನ್ನು ಮಾಡಿದರೆ ಹೇಗೆ? ಎಲ್ಲರೂ ನಿಯಮಗಳ ಪ್ರಕಾರ ನಡೆಯಬೇಕು. ಆದರೆ ನಿಯಮವನ್ನು ಮೀರಿ ತಾವು ಕೊಟ್ಟಿರತಕ್ಕಂಥ....

ಶ್ರೀ ಜಗದೀಶ್ ಶೆಟ್ಟರ್ : ರೈತರಿಗೆ ಅನ್ಯಾಯವಾದಾಗ, ನೀರಿನ ತೊಂದರೆಯಾದಾಗ ಅದರ ಬಗ್ಗೆ ಸರ್ಕಾರಕ್ಕೆ ಯಾವ ಕಾಳಜಿ ಇಲ್ಲ. ರೈತರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ. ಇಡೀ ಕರ್ನಾಟಕದ ಎಲ್ಲಾ ಕಡೆ ಬರಗಾಲ ಬಂದಿದೆ ಮತ್ತು ಬೆಳೆ ವಿಮೆ ಎಷ್ಟಾಗಿದೆ ಅದಕ್ಕೆ ಇವ್ವೊತ್ತಿಗೂ ಹಣ ಬಿಡುಗಡೆ ಆಗಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ : ಸರಿಯಾಗಿ ಮಾಹಿತಿಗಳನ್ನು ಕೊಡಬೇಡವೆ?

ಶ್ರೀ ಜಗದೀಶ್ ಶೆಟ್ಟರ್ : ಬೆಳೆ ವಿಮೆಗೆ ಸಂಬಂಧಪಟ್ಟಂತೆ ಇವತ್ತಿಗೂ ಹಣವನ್ನು ಸರ್ಕಾರ ಬಿಡುಗಡೆ ಮಾಡಿಲ್ಲ. ಈ ಸರ್ಕಾರದ ನೀತಿ ನಿಯಮಗಳನ್ನು ಖಂಡಿಸಿ ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಬಿ.ಜೆ.ಪಿ. ಸದಸ್ಯರುಗಳೆಲ್ಲರೂ ಸದನದಿಂದ ಸಭಾತ್ಯಾಗವನ್ನು ಮಾಡಿದರು)

ಶ್ರೀ ಡಿ.ಬಿ.ಚಂದ್ರೇಗೌಡ : ಅದೇ ಮಾಡ್ಬೇಕು, ಬೇರೇನಿದೆ ನಿಮಗೆ?

ಅಧ್ಯಕ್ಷರು : ಇದ್ದೇ ಇದೆಯಲ್ಲಾ. ಕಾಮನ್ ಆಗಿ ನೀವು ಮಾಡೋದು ಅದೇ ತಾನೇ?

8.40 ಪಿ.ಎಂ

ಶ್ರೀ ಎಸ್.ಎಸ್. ಪಾಟೀಲ್ : ನಾನು ಯಾವುದೇ ರಾಜಕೀಯ ಮಾತನ್ನು ಹೇಳುತ್ತಿಲ್ಲ. ಹಿಂದಿನಿಂದ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಅವರು ಏನು ನಿನ್ನೆ ಪ್ರಸಾಪಿಸಿದ್ದರು, ಇವ್ವೊತ್ತು ಏನಾಯಿತು?

ಶ್ರೀ ಕೆ.ಹೆಚ್.ರಂಗನಾಥ್ : ಅವರು ಎದ್ದು ಹೋಗಿದ್ದಕ್ಕೆ ಏನು ಹೇಳುತ್ತೀರಿ?

ಅಧ್ಯಕ್ಷರು: ಮುಗಿದಿರುವ ಕಥೆಯನ್ನು ಮತ್ತೆ ಮತ್ತೆ ರೀಓಪನ್ ಮಾಡುತ್ತಿರಿ ಪಾಟೀಲರೆ, that matter is closed yesterday itself ಅದರ ಬಗ್ಗೆ ರೂಲ್ಸ್ ಕಮಿಟಿಯಲ್ಲಿ ಚರ್ಚೆ ಮಾಡೋಣ ಎಂದು ಹೇಳಿದ್ದೇನೆ. again you are repeating.

ಶ್ರೀ ಡಿ.ಬಿ.ಚಂದ್ರೇಗೌಡ :ತಮ್ಮ ಗಮನಕ್ಕೆ ಒಂದು ವಿಷಯ ತರುತ್ತೇನೆ. ನಾನು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಯಾಗಿ ಹೇಳುವುದೇನೆಂದರೆ, ಇವ್ವೊತ್ತು ಐದು ಗಮನ ಸೆಳೆಯುವ ಸೂಚನೆಗಳಿವೆ. ಇದನ್ನು ಬಿಟ್ಟು ಆ ಒಂದು ವಿಷಯವನ್ನು ಪ್ರಸ್ತಾಪಿಸಬೇಕೆಂದು ಮಾನ್ಯ ಸಭಾಧ್ಯಕ್ಷರು ಹೇಳಿದಾಗ ಸುಮಾರು ನಲವತ್ತೈದು ನಿಮಿಷಗಳ ಕಾಲ ಕೈತರ ಸಮಸ್ಯೆ ಎಂದು ಮಾತನಾಡಿದರು. ನಂತರ, ವಾಕ್‌ಔಟ್.ಏನಾಯಿತು? ರೈತರ ಸಮಸ್ಯೆ ಬಗ್ಗೆ ಸರ್ಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿಲ್ಲವೆನ್ನುತ್ತಾರೆ. 45 ನಿಮಿಷಗಳ ಕಾಲ ಜೀರೋ ಅವರ್‌ನಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಟ್ಟರೂ ಕೂಡ, ಅದು ಕೂಡ ಪ್ರಮುಖ

ರಾಜಕೀಯ ಪಕ್ಷ, ರಾಷ್ಟ್ರ ನಡೆಸತಕ್ಕಂಥ ಪಕ್ಷ, ಸಂಸದೀಯ ವ್ಯವಹಾರಗಳನ್ನು ಮೀರಿ ಕೂಡ ನಾವು ರಾತ್ರಿ ಒಂಭತ್ತು ಗಂಟೆವರೆಗೆ ಕುಳಿತುಕೊಂಡು ಅವರು ಹೇಳಿದ್ದನ್ನೆಲ್ಲಾ ಕೇಳಿದರೂ ಕೂಡ ಅವರು ವಾಕ್‌ಔಟ್ ಮಾಡತಕ್ಕಂಥ ಕ್ರಮ ಇದೆಯೆಲ್ಲ, ಇದನ್ನು ನೀವು-ನಾವು ಸೇರಿ ಖಂಡಿಸಬೇಕು.

+ ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ) : ನಾನು ಮೊದಲನೆಯದಾಗಿ ಪ್ರಸ್ತಾಪಿಸಬಯಸುವುದೇನೆಂದರೆ, ಸುಮಾರು ಒಂದು ತಿಂಗಳ ಕಾಲ ನಾವು ಈ ಸಭೆಯನ್ನು ನಡೆಸಿದ್ದೇವೆ. ಮಾನ್ಯ ಅಧ್ಯಕ್ಷರೆ, ನಾವು ರಾಜ್ಯದ ಜನರ ಹಿತದೃಷ್ಟಿಯಿಂದ ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ನಮ್ಮ ಪಕ್ಷದ ವತಿಯಿಂದಾಗಿ ನಾವಂತೂ ಈ ಸದನವನ್ನು ಏನೋ ಒಂದು ಪೊಲಿಟಿಕಲ್ ಪಾಯಿಂಟ್ ಅನ್ನು ಗೈನ್ ಮಾಡಬೇಕೆಂದು ಯಾವತ್ತೂ ಬಯಸಿದವರಲ್ಲ. That is what Mr. Patel had told us, Mr. Hegde has told us and Mr. Bommai has told us and that's how we proceed. ಈಗ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದೆರಡು ವಿಚಾರ ಪ್ರಸ್ತಾಪಿಸುವುದೇನೆಂದರೆ, ಈ ಸದನಕ್ಕೆ ಸಂಬಂಧಿಸಿದಂತೆ ಒಂದು ತಿಂಗಳ ಕಾಲ ನಾವು ಚರ್ಚೆ ಮಾಡಿದ್ದೇವೆ. ಸಾಕಷ್ಟು ಚರ್ಚೆಯಾಗಿದೆ. ಚರ್ಚೆಯ ಗುಣಮಟ್ಟವನ್ನು ಉತ್ತಮಪಡಿಸುವ ದೃಷ್ಟಿಯಿಂದ ನಾವೆಲ್ಲರೂ ಅದರ ಬಗ್ಗೆ ಸ್ವಲ್ಪ ಚಿಂತನೆ ಮಾಡಿದರೆ ನನಗನಿಸುತ್ತದೆ. ಈ ಸದನಕ್ಕೆ ಹೆಚ್ಚಿನ ಇನ್ನೂ ಹೆಚ್ಚಿನ ಗೌರವ ಬರುವಂತೆ ನಾವೆಲ್ಲರೂ, ನಾನು ಆ ಪಕ್ಷ, ಈ ಪಕ್ಷ, ಆಡಳಿತ ಪಕ್ಷ ಎನ್ನುವುದರ ಬದಲು ನಾವು ಇನ್ನೂ ಸ್ವಲ್ಪ ಸಂಯಮದಿಂದ ನಡೆದುಕೊಂಡರೆ ಅನುಕೂಲವಾಗುತ್ತದೇನೋ ಎಂದು ನಾನು ವಿಚಾರ ಮಾಡಿದ್ದೇನೆ. ತಾವು ಸದನವನ್ನು ಚೆನ್ನಾಗಿ ನಡೆಸಿದ್ದೀರಿ. ತಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಮತ್ತು ನಮಗೆಲ್ಲರಿಗೂ ಈ ಸಲ ಮುಖ್ಯಮಂತ್ರಿಗಳಾದಿಯಾಗಿ, ಗೃಹಮಂತ್ರಿಗಳಾದಿಯಾಗಿ, ಕಂದಾಯ ಮಂತ್ರಿಗಳವರೆಗೆ ಸಹ ಬೋಜನ ಕೊಟ್ಟು ನಿಂತುಹೋಗಿದ್ದ ಸಂಪ್ರದಾಯವನ್ನು ಪುನಃ ಪ್ರಾರಂಭಿಸಿದ್ದಾರೆ. ನನಗೆ ಆಗದಿರುವ ಒಂದು ನೋವು ಏನೆಂದರೆ, ಶಾಸಕರ ದಿನಾಚರಣೆ ಎಂದು ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರತಿ ವರ್ಷ ಮಾಡುತ್ತಿದ್ದೆವು. ಒಂದು ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಹೆಸರಾಗಿದ್ದವರು. ಇತ್ತೀಚೆಗೆ ಏಕೋ ಅವರು ಬಹಳ ಗಂಭೀರ ಸ್ವರೂಪ ತಾಳಿಕೊಳ್ಳುತ್ತಾರೆ, ಮೌನವಾಗಿರುತ್ತಾರೆ. ಅನೇಕ ಸಂದರ್ಭಗಳಲ್ಲಿ ಅವರು ತಮ್ಮ ಮೌನ ಮುರಿದರೆ ಈ ಸಮಸ್ಯೆಗಳಿಗೆಲ್ಲಾ ಪರಿಹಾರ ಹುಡುಕಬಹುದಾಗಿತ್ತೇನೋ ಎಂದು ಮಾನ್ಯ ಸದಸ್ಯರಾದ ಎಸ್.ಎಸ್.ಪಾಟೀಲರವರ ಕೊರಗು. ನನ್ನ ಕೊರಗೂ ಸಹ ಅದೇ ಆಗಿದೆ. ಅದೇನೇ ಇರಲಿ. ಅದನ್ನು ಮಾಡಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ನಾನು ಅಂದುಕೊಂಡಿರುವಂತೆ ಹಿರಿಯೂರು ಘಟನೆ ವಿಚಾರದಲ್ಲಿ ಒಂದು ಜಂಟಿ ಸದನ ಸಮಿತಿ ರಚಿಸಬೇಕೆಂದು ತಮಗೆ ಅಧಿಕಾರ ಕೊಟ್ಟಿದ್ದೇವೆ. ಅದನ್ನು ತಾವು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ ಹಾಗೂ ತಾವು ಮಾಡುತ್ತೀರೆಂದು ನಾನು ನಂಬಿದ್ದೇನೆ. ಬೆಳೆ ವಿಮೆ ವಿಚಾರದಲ್ಲಿ ಮಾನ್ಯ ಸದಸ್ಯರಾದ ಎಸ್.ಎಸ್.ಪಾಟೀಲರು ಏನು ಹೇಳಿದ್ದಾರೆ, ಅವರನ್ನು ಕರೆಸಿ ಒಂದು ಚರ್ಚೆ ಮಾಡಿ ತಾವು ದಯವಿಟ್ಟು ಅದಕ್ಕೆ ಪರಿಹಾರ ಹುಡುಕುವ ದೃಷ್ಟಿಯಿಂದ ಪ್ರಯತ್ನ ಮಾಡಬೇಕೆಂದು ಹೇಳುತ್ತೇವೆ. ಇನ್ನೊಂದು ವಿಚಾರವೇನೆಂದರೆ, ಮಾನ್ಯ ಮಂತ್ರಿಗಳಾದ ಕೋಳಿವಾಡ್‌ರವರ ಕಾರ್ಯವೈಖರಿ ನನಗೆ ತುಂಬಾ ಹಿಡಿಸಿತು. ಇದನ್ನೆಲ್ಲಾ ನಾವು ರೆಕಗನೈಸ್ಡ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಕೆಲಸ ಮಾಡುವುದಕ್ಕೆ ಪ್ರೋತ್ಸಾಹ ಸಿಗುವುದಿಲ್ಲ. ಮಾಡುವವರೂ

ಹಾಗೂ ಮಾಡದಿದ್ದವರೂ ಒಂದೇ ಅನ್ನಿಸುತ್ತದೆ. ನಾನು ಹದಿಮೂರು ವರ್ಷಗಳ ಕಾಲ ಮಂತ್ರಿಯಾಗಿದ್ದೆ. ಒಂದು ದಿವಸ ಸಹ ಈ ರಿಟರ್ನ್ ಆನ್ಸರ್ ಏನು ಕೊಡುತ್ತೇವೆ, ಅದಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ, ಶಾಸಕರನ್ನು, ಅಧಿಕಾರಿಗಳನ್ನು ಕರೆಸಿ ಸಭೆ ಮಾಡಿ ಏನೇನು ಸಮಸ್ಯೆಗಳಿವೆ ಎಂದು ತಿಳಿದುಕೊಂಡು ಇತ್ಯರ್ಥಗೊಳಿಸುವ ಹೊಸ ಸಂಪ್ರದಾಯವನ್ನು ಅವರು ಪ್ರಾರಂಭಿಸಿದ್ದಾರೆ. ನನಗೆ ಇದರ ಬಗ್ಗೆ ಬಹಳ ಸಂತೋಷವುಂಟಾಗಿರುವುದನ್ನು ಈ ಸಂದರ್ಭ ನಲ್ಲಿ ವ್ಯಕ್ತಮಾಡಲು ಬಯಸುತ್ತೇನೆ. ಬಹಳ ಮುಖ್ಯವಾಗಿ ಈ ಬೆಳೆ ವಿಮೆ ವಿಚಾರದಲ್ಲಿ ಮಾನ್ಯ ಕೃಷಿ ಮಂತ್ರಿಗಳು ಗಮನಹರಿಸಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮುಖ್ಯಮಂತ್ರಿಗಳನ್ನು ಈ ಸಂಬರ್ಭದಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, 15ನೇ ತಾರೀಕಿನವರೆಗೂ ಹೆಚ್ಚು-ಕಡಿಮೆ ಮಳೆ ಬಂದರೆ ಬಹಳ ಒಳ್ಳೆಯದೆಂಬುದು ನಮ್ಮೆಲ್ಲರ ಅಭಿಪ್ರಾಯವಿದೆ. ಮಳೆ ಬಾರದಿದ್ದರೆ ಶಾಸಕರ ಒಂದು ಚಾಲನೆಯಲ್ಲಿ ಬರಗಾಲದ ಪರಿಹಾರ ಕೆಲಸವನ್ನು ಹಮ್ಮಿಕೊಳ್ಳಲಾಗುವುದೆಂದು ತಾವು ಮೇಲ್ಮನೆಯಲ್ಲಿ ಹೇಳಿದ್ದೀರಿ, ಇಲ್ಲಿ ಹೇಳಿಲ್ಲ. ತಾವು ಇದರ ಬಗ್ಗೆ ಒಂದು ಪ್ರಕಟಣೆ ಮಾಡಿದರೆ ಅಧಿಕಾರಿಗಳಿಗೆ ಅದು ತಲುಪುತ್ತದೆ. ತಹಶೀಲ್ದಾರ್, ಎಕ್ಸಿಕ್ಯೂಟಿವ್ ಆಫೀಸರ್ ಅಥವಾ ಜ್ಯೂನಿಯರ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಇವರೆಲ್ಲರಿಗೂ ತಲುಪುತ್ತದೆ. ಮತ್ತೊಂದು ಬಹಳ ಮುಖ್ಯವಾದ ವಿಚಾರವೇನೆಂದರೆ, ಒಂದು ಪ್ರಾಕ್ಟಿಕಲ್ ಪ್ರಾಬ್ಲಂ ಇದೆ. That is what I wanted to bring in. ಏನೆಂದರೆ, ಈಗ ಗ್ರಾಮ ಪಂಚಾಯಿತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ, ಜಿಲ್ಲಾ ಪಂಚಾಯಿತಿಗಳಿಗೆ depending on the population ಎಸ್‌ಜೆಆರ್‌ವೈನಲ್ಲಿ ಒಂದಷ್ಟು ಪುಡ್ ಕೊಡುತ್ತಾರೆ. ಪ್ರತಿ ಜಿಲ್ಲೆಗೂ 2-3 ಕೋಟಿ ರೂಪಾಯಿಗಳಷ್ಟು ದುಡ್ಡು ಕೊಡುತ್ತಾರೆ. 10-15 ಪರ್ಸೆಂಟ್‌ನಷ್ಟು ಅದರಲ್ಲಿ ಫೈನಾನ್ಸ್ ಕಾಂಪೊನೆಂಟ್ ಇದೆ. ಈಗ ಬರಗಾಲಕ್ಕೂ ಸಹ ಅಕ್ಕಿ ಕೊಡುತ್ತಿದ್ದೀರಿ. ಆದರೆ, ವಾಸ್ತವಾಂಶದಲ್ಲಿ ಏನಾಗಿದೆಯೆಂದರೆ, ಎನ್‌ಎಂಆರ್ ರಿಜಿಸ್ಟರ್‌ಗಳನ್ನು ಯಾರೂ ಮೇನ್‌ಟೇನ್ ಮಾಡುವುದಕ್ಕಾಗುವುದಿಲ್ಲ. ನಾವು ಜೆಸಿಬಿ ತೆಗೆದುಕೊಂಡು ಕೆಲಸ ಮಾಡಿಸುತ್ತೇವೆ. ಈಗ ಅಲ್ಲಿ ಏನಾಗಿದೆಯೆಂದರೆ, ಲೋಕಾಯುಕ್ತ ರೈಡ್ ಪ್ರಾರಂಭವಾದ ನಂತರ ಕೆಳಮಟ್ಟದಲ್ಲಿರುವ ಅಧಿಕಾರಿಗಳು ಎನ್‌ಎಂಆರ್ ರಿಜಿಸ್ಟರ್‌ಗಳನ್ನೂ ಮೇನ್‌ಟೇನ್ ಮಾಡಿಕೊಳ್ಳುವುದಕ್ಕೆ ತಯಾರಿಲ್ಲ. ಜೊತೆಗೆ ದುಡ್ಡಿನ ಕಾಂಪೊನೆಂಟ್ ಅನ್ನು ಸಹ ಕೊಡುವುದಕ್ಕೆ ಆಗದಿರುವುದರಿಂದ ರಿಲೀಫ್ ವರ್ಕ್ practically even at this hour ಪ್ರಾರಂಭವಾಗದಿರುವಂಥಾದ್ದನ್ನು ನಾವೆಲ್ಲರೂ ಅನೇಕ ಸಂದರ್ಭಗಳಲ್ಲಿ ನೋಡಿದ್ದೇವೆ. ಆದ್ದರಿಂದ, ದಯಮಾಡಿ ಇದಕ್ಕೊಂದು ಪರಿಹಾರ ಕಂಡುಕೊಳ್ಳಲು ಮಾನ್ಯ ಗೃಹಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದೀರಿ. ತಾವೇ ಇದರತ್ತ ನಿಗಾ ಕೊಟ್ಟು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಒಂದು ಪ್ರಯತ್ನ ಮಾಡಿದರೆ ಚೆನ್ನಾಗಿರುತ್ತದೆ. ಬರಗಾಲದ ಒಂದು ಸಮಸ್ಯೆ ಬಗೆಹರಿಸುವುದಕ್ಕೆ ಇದು ಅನುಕೂಲವಾಗುತ್ತದೆಂದು ನಾನು ತಿಳಿದು ಈ ವರ್ಷವಾದರೂ ಸಹ 60-70 ದಿವಸಗಳ ಕಾಲ ಸದನ ನಡೆಸಲು ತಾವು ಪ್ರಯತ್ನಿಸಿದರೆ ಈ ವರ್ಷ ಸಾಧ್ಯವಿದೆ. ನನಗೆ ಹಿರಿಯ ಸಚಿವರೊಬ್ಬರು ಹೇಳುತ್ತಿದ್ದರು ಮುಂಬರುವ ನವೆಂಬರ್‌ನಲ್ಲಿ ಈ ಸರ್ಕಾರ ತನ್ನ ಮೂರು ವರ್ಷಗಳ ಅಧಿಕಾರಾವಧಿಯನ್ನು ಪೂರೈಸುತ್ತದಾದ್ದರಿಂದ ಆ ಸಂದರ್ಭದಲ್ಲಿ ಅಧಿವೇಶನವನ್ನು ಕರೆಸುತ್ತೇವೆಂದು ತಿಳಿಸಿದ್ದಾರೆ. ನನ್ನ ಸಲಹೆಯೂ ಸಹ ಏನೆಂದರೆ, ನವೆಂಬರ್ ತಿಂಗಳಿನಲ್ಲಿ 10-15 ದಿವಸಗಳ ಕಾಲ ಸದನವನ್ನು ನಡೆಸಿದರೆ ನಾವು

ಅರವತ್ತು ದಿವಸವನ್ನು ತಲುಪಬಹುದು. ಮತ್ತೊಂದು, ಸಿಂಗಟಾಲೂರು ಯೋಜನೆ ಜಾರಿಗೊಳಿಸುವ ವಿಚಾರದಲ್ಲಿ ಮಾನ್ಯ ಸಚಿವರಾದ ಹೆಚ್.ಕೆ.ಪಾಟೀಲ್‌ರವರು ಹೆಚ್ಚಿಗೆ ಆ ಸದನದಲ್ಲೇ ಇರುತ್ತಾರೆ. ನೀರಾವರಿಗೆ ಸಂಬಂಧಿಸಿದಂತೆ ನಾವು ಅನೇಕ ವಿಚಾರಗಳನ್ನು ಹೇಳುವುದಕ್ಕಾಗಲಿಲ್ಲ. ಮಾನ್ಯ ಸದಸ್ಯರಾದ ಶಿವಾನಂದ ಪಾಟೀಲ್‌ರವರು ಒಂದು ರಿಮಾರ್ಕ್ ಮಾಡಿ ಹೊರಟುಹೋದರು. ಆ ರಿಮಾರ್ಕ್‌ಗಳಿಂದ ಬಹಳ ನೋವಾಗುತ್ತದೆ. ಆ ರಿಮಾರ್ಕ್‌ಗಳಿಗೆ ಮಾನ್ಯ ನೀರಾವರಿ ಸಚಿವರು ಸಮಂಜಸವಾದ ಉತ್ತರಗಳನ್ನು ಕೊಡಬೇಕಾಗಿತ್ತು, ಕೊಟ್ಟಿಲ್ಲ. ಸಿಂಗಟಾಲೂರು ಯೋಜನೆ ಬಗ್ಗೆ ತಾವು ವಿಶೇಷ ಗಮನಹರಿಸುವ ಮುಖಾಂತರ ಒಂದು ಸಭೆ ಕರೆಸಬೇಕೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ನಾವು ಅನೇಕ ಸಂದರ್ಭಗಳಲ್ಲಿ ಧರಣಿ, ಸಭಾತ್ಯಾಗ ಮಾಡುತ್ತೇವೆ. ಬೇರೆಯವರು ನಮ್ಮನ್ನು ಆದರ್ಶವಾಗಿ ನೋಡಬೇಕೆಂದು ನಾವು ಆಸಕ್ತಿ ವಹಿಸುತ್ತೇವೆ. ಆದರೆ, ಮೇಲುಗಡೆ ನೋಡಿದಾಗ ನಮಗೆ ಹಾಗೆ ಅನ್ನಿಸುವುದಿಲ್ಲ. ಏಕೆಂದರೆ, ಪಾರ್ಲಿಮೆಂಟ್‌ನಲ್ಲಿ ನೀವು ಬಾವಿಗೆ ಬೀಳುತ್ತಿದ್ದೀರಿ, ಅದಕ್ಕೆ ನಾವೂ ಬೀಳುತ್ತಿದ್ದೇವೆ. ಇದನ್ನು ತಿಳಿದುಕೊಳ್ಳಬೇಕು. ಸುಮ್ಮನೆ ತಾವು ಏನೋ ಮಾತನಾಡಿಬಿಡುತ್ತೀರಿ. ಅಧ್ಯಕ್ಷರೆ, ನಾನು ಹೇಳುವುದೇನೆಂದರೆ, ನಾವು ಅನೇಕ ಸನ್ನಿವೇಶದಲ್ಲಿ ಇದೆಲ್ಲವೂ parliamentary system of democracyಯಲ್ಲಿ ಇರತಕ್ಕಂಥಾದ್ದೇ. It is there. ಇದರಿಂದ ಯಾರದೋ ಮನಸ್ಸನ್ನು ನೋಯಿಸಬೇಕು, ಯಾರ ಮನಸ್ಸಿಗೋ ಚುಚ್ಚಬೇಕು, ಯಾರಿಗೂ ಏನೋ ಮಾಡಿಬಿಡಬೇಕು, ಏನೋ ನಾವು ಸ್ಕೋರ್ ಮಾಡಿಬಿಡುತ್ತೇವೆ ಎನ್ನುವ ದೃಷ್ಟಿಯಿಂದ ನಾವು ಮಾಡುವುದಿಲ್ಲ. ಸದನ ಚೆನ್ನಾಗಿ ನಡೆದಿದೆ. ರಾಜ್ಯದಲ್ಲಿ ಬರಗಾಲ ಇದೆ. ಬರಗಾಲದ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ನಾನು ಸಲಹೆ ಕೊಟ್ಟಿರುವ 2-3 ವಿಚಾರಗಳ ರೆಡೆಗೆ ಗಮನಹರಿಸಬೇಕೆಂದು ಕೋರುತ್ತೇನೆ. ನಾವೆಲ್ಲರೂ ನಾನು-ನಮ್ಮ ಕ್ಷೇತ್ರಗಳಿಗೆ ನಾಳೆಯಿಂದ ಹೋಗುತ್ತೇವೆ. ದಯಮಾಡಿ ತಾವು ಇದನ್ನು ಘೋಷಣೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ತಮ್ಮ ಬಗ್ಗೆ ಅನೇಕ ಸಾರಿ ವಿರೋಧಪಕ್ಷದವರಾದ ನಾವು ಪ್ರೀತಿ, ವಿಶ್ವಾಸ, ಸಿಟ್ಟು ಎಲ್ಲವನ್ನೂ ಸಹ ನಾವು ವ್ಯಕ್ತ ಮಾಡುತ್ತೇನೆ. ನೀವು ನಮ್ಮ ರಕ್ಷಣೆಗೆ ಬಂದಿದ್ದೀರಿ. ಕೆಲವು ಸಂದರ್ಭಗಳಲ್ಲಿ ತಾವು ಸಹ ಆಡಳಿತ ಪಕ್ಷದವರನ್ನು ಸಮಾಧಾನದಿಂದ ಇಟ್ಟುಕೊಳ್ಳಬೇಕಾಗುತ್ತದೆ. ಅನೇಕ ಮಂತ್ರಿಗಳು ಮಾಡಿರುವುದು ತಪ್ಪು ಎನ್ನತಕ್ಕಂಥಾದ್ದನ್ನು ಪೀಠದಿಂದ ಹೇಳಿದ್ದೀರಿ, ಅದಕ್ಕಿಂಥ ಹೆಚ್ಚಿನದನ್ನು ನಾವು ನಿರೀಕ್ಷಿಸುವುದಕ್ಕೆ ಹೋಗುವುದಿಲ್ಲ. ಸದನ ಯಶಸ್ವಿಯಾಗಿ ನಡೆದಿದೆ, ನನಗೆ ಬಹಳ ಸಂತೋಷವಾಗಿದೆ, ನನ್ನ ತೃಪ್ತಿಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಿ ಬರಗಾಲದ ಪರಿಸ್ಥಿತಿ ಬಗ್ಗೆ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಮೌನ ತಾಳದೆ ತಮ್ಮ ಪ್ರತಿಕ್ರಿಯೆ ನೀಡಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಸಿ.ಚೆನ್ನಿಗಪ್ಪ :ಮಾನ್ಯ ಅಧ್ಯಕ್ಷರೆ, ಈ ಅಧಿವೇಶನವನ್ನು ಸಂಪ್ರದಾಯದಂತೆ ನಡೆಸಿಕೊಂಡು ಬಂದು ಅನೇಕ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಿ ಸರ್ಕಾರ ಉತ್ತಮವಾದಂಥ ಒಂದು ಕೆಲಸಕ್ಕೆ ಕೈ ಹಾಕಿದೆ. ಮಾನ್ಯ ಮುಖ್ಯಮಂತ್ರಿಗಳೇನು ತಮ್ಮದೇ ಆದ ರೀತಿಯಲ್ಲಿ ಒಳ್ಳೆಯ ಕೆಲಸಗಳೇನು ಮಾಡುತ್ತಿದ್ದಾರೆ ಅದಕ್ಕೆ ನಮ್ಮದೂ ಕೂಡ ಬೆಂಬಲವನ್ನು ವ್ಯಕ್ತ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :ಈಗ ಒಂದು ಕ್ಲಾರಿಫಿಕೇಶನ್. ಸ್ಪೋರ್ಟ್ಸ್, ಸಾಂಸ್ಕೃತಿಕ ಕಾರ್ಯಕ್ರಮಗಳು ಶಾಸಕರಿಗಾಗಿ ಮಾಡುತ್ತಿದ್ದದ್ದು ನಿಂತುಹೋಗಿದೆ ಎಂದು ಸಿಂಧ್ಯಾರವರು ಹೇಳಿದರು. ನಿಂತಿಲ್ಲ. ನಾವು ಆಲ್ ಇಂಡಿಯಾ ಪ್ರಿಸೈಡಿಂಗ್ ಅಫೀಸರ್ಸ್ ಕಾನ್‌ಫರೆನ್‌ನಲ್ಲಿ ಒಂದೂವರೆ ತಿಂಗಳು ಬಿಜಿಯಾಗಿದ್ದೆವೆ. ಅದಾದ ತಕ್ಷಣ ಅಸೆಂಬ್ಲಿಸೆಷನ್ ಪ್ರಾರಂಭವಾಗಿಬಿಟ್ಟಿತಲ್ಲಾ. ಈಗ ಗೋಲ್ಡನ್ ಜ್ಯುಬಿಲಿ ಬಗ್ಗೆ ಸೆಕ್ಷ್ಪ ಸೆಷನ್‌ನ್ ಬರುವುದರೊಳಗಡೆ ಒಂದು ಸಮಿತಿ ಮಾಡಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಹಾಗೂ ಕ್ರೀಡೆಗಳಿಗಾಗಿಯೇ ಈ ರೀತಿಯಲ್ಲಿ ನಾನಾ ರೀತಿಯ ಕಮಿಟಿ ಮಾಡುತ್ತೇವೆ, ಸೆಕ್ಸ್ಪ್ಸೆಷನ್ ಕರೆಯುತ್ತೇವಲ್ಲಾ ಆವಾಗ ಸಾಂಸ್ಕೃತಿಕ ಕಾರ್ಯಕ್ರಮ, ಸ್ಪೋರ್ಟ್ಸ್ ಎಲ್ಲಾ ನಡೆಯುತ್ತದೆ. ತಾವೇನೂ ಬೇಜಾರು ಮಾಡಿಕೊಳ್ಳಬೇಡಿ. ಅದು ನಿಂತಿಲ್ಲ.

+ ಶ್ರೀ ಎಸ್.ಎಂ.ಕೃಷ್ಣ (ಮಾನ್ಯ ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಸದನದ ಅಧಿವೇಶನ ಈ ದಿವಸ ಕೊನೆ ಆಗುತ್ತಿದೆ. ನನಗೆ ಒಂದು ರೀತಿ ದುಃಖವಾಗುತ್ತಿದೆ. ಏಕೆಂದರೆ ಕಳೆದ 25 ದಿವಸಗಳ ಕಾಲ ನೀವು ಹೇಳಿದ್ದನ್ನು, ನಾವು ಹೇಳಿದ್ದನ್ನು ಒಬ್ಬರಿಗೊಬ್ಬರು ಕೇಳಿಕೊಂಡಿದ್ವಿ. ನಾಳೆಯಿಂದ ಒಂದು ರೀತಿ ಶೂನ್ಯ ಎಂದು ಹೇಳುವುದಕ್ಕೆ ಬರುವುದಿಲ್ಲ. ಆದರೆ ಏನು ಒಡನಾಡಿದ್ವು ನಾವು ಅದನ್ನು we will miss it. You will miss it; I will miss it; all the members here; all the members there miss it. ವಿರೋಧ ಪಕ್ಷದ ನಾಯಕರು ಸಭಾತ್ಯಾಗ ಮಾಡಬಹುದು, ಎಷ್ಟೋ ಸಭಾತ್ಯಾಗಗಳು ಮಾಡಿದ್ದಾರೆ, ನಾವೂ ಮಾಡಿದ್ದೇವೆ, ನೀವು ಮಾಡಿದ್ದೀರಿ, ಮಾನ್ಯ ಪಾಟೀಲರು ಹೇಳಿದ ಹಾಗೆ ಒಂದು ಸಂಪ್ರದಾಯವೇ ಇದೆ. ಕಳೆದ ಐವತ್ತು ವರ್ಷಗಳಲ್ಲಿ ನಾವು ಧರಣಾ, ಧಿಕ್ಕಾರ, ಬಾವಿಯೊಳಗೆ ಬರುವುದು, ಪುನಃ ಹೋಗಿ ಅಲ್ಲಿ ನಿಂತುಕೊಂಡು ಮಾತನಾಡುವುದು, ನಮ್ಮವರು ಮಾತನಾಡುವುದು, ಇವೆಲ್ಲಾ ನಡೆದಿರತಕ್ಕಂಥದ್ದು. ಬಹುಶಃ ನಮ್ಮ westminister model ಹೋಗಿ ನಮ್ಮದೇ ಆದಂಥ ಒಂದು ಮಾಡೆಲ್‌ನ್ನು ನಾವು ತರಪೇತಿ ಮಾಡ್ತಾ ಇದ್ದೇವೆ. ಆದರೆ ಅದಕ್ಕೆ ಇತಿಮಿತಿಗಳೇನು ಎನ್ನತಕ್ಕಂಥದ್ದನ್ನು ಸೂಕ್ಷ್ಮ ಪ್ರಜ್ಞೆ ಇರತಕ್ಕಂಥ ನಾವುಗಳೆಲ್ಲರೂ ಕೂಡ ಕೊಂಚ ಮಟ್ಟಿಗೆ ವಿಚಾರ ಮಾಡತಕ್ಕಂಥದ್ದು ಪ್ರಜಾಪ್ರಭುತ್ವದ ಭವಿಷ್ಯದ ದೃಷ್ಟಿಯಿಂದ ಬಹಳ ಅಗತ್ಯವಿದೆಯೆಂದು ಹೇಳಿ ನಾನು ಭಾವನೆ ಮಾಡುತ್ತೇನೆ. ಮಾನ್ಯ ಪಾಟೀಲರೆ ತಾವು ಏನು ಹೇಳಿದಿರಿ ಆ ಮಾತನ್ನು ನಾನು ಪ್ರತಿಯೊಂದು ಅಕ್ಷರವನ್ನು ನಾನು ಒಪ್ಪುತ್ತೇನೆ. ಒಂದು ಕೋಟಿನೋ, ಎಪ್ಪತ್ತು ಲಕ್ಷಾನೋ, ಐವತ್ತು ಲಕ್ಷಾನೋ, ಹತ್ತು ಲಕ್ಷಾನೋ ಅದು ಗೌಣ, ಎಷ್ಟು ಖರ್ಚಾಗುತ್ತದೆ ಎನ್ನತಕ್ಕಂಥದ್ದು ಗೌಣ. ಆದರೆ ನಮ್ಮ ಸಮಯ ಏನಿದೆ ಅದಕ್ಕೆ ಬೆಲೆ ಕಟ್ಟತಕ್ಕಂಥದ್ದು ಯಾರಿಂದಲೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಅಮೂಲ್ಯವಾದ ಸಮಯವನ್ನು ಬಹುಶಃ ಯಾವುದಾದರೂ ಒಂದು ರಚನಾತ್ಮಕವಾದಂಥ ವಿಚಾರದಲ್ಲಿ ಚರ್ಚೆ ಮಾಡತಕ್ಕಂಥದ್ದು. ಮಾನ್ಯ ಶಿವಾನಂದ ಪಾಟೀಲರು ಭೀಮಾ ನದಿ ವಿಚಾರದಲ್ಲಿ ಅತ್ಯಂತ ಗಂಭೀರವಾದಂಥ ವಿಚಾರದ ಬಗ್ಗೆ ಸದನದ ಗಮನವನ್ನು ಸೆಳೆದಿದ್ದಾರೆ. ಮಾನ್ಯ ಅಧ್ಯಕ್ಷರೆ, ತಾರು ಆ ವಿಚಾರದ ಮಹತ್ವವನ್ನು ಅರ್ಥ ಮಾಡಿಕೊಂಡು; ಏಕೆಂದರೆ ತಾರು ಬರುತ್ತಾ ಇರತಕ್ಕಂಥದ್ದೇ ಬರಜಿಲ್ಲೆಯಿಂದ, ಕೋಲಾರ ಜಿಲ್ಲೆಯಿಂದ, ಆದ್ದರಿಂದ ಬಿಜಾಪುರದ ಜನಗಳ ಜ್ವಲಂತ ಸಮಸ್ಯೆ ಏನು ಎನ್ನತಕ್ಕಂಥದ್ದರ ಸ್ವಂತ ಅನುಭವ ತಮಗೆ ಇದೆ. ಆ ಅನುಭವದ ಹಿನ್ನೆಲೆಯಲ್ಲಿ ನೀವು ಅವರಿಗೆ ಅವಕಾಶವನ್ನು ಕೊಟ್ಟಿರಿ, ಆದರೆ ಅವರು ಆ ಅವಕಾಶವನ್ನು ಒಂದು ಭಾಷಣವನ್ನು ಅಲಂಬಿಸುವುದರಿಂದ ನಮ್ಮ

ಆ ವಿಷಯದ crux ಗೆ ಹೋಗ್ಲಿಕ್ಕೆ ಆಗೋದಿಲ್ಲ. ಅದ್ದರಿಂದ ಚಿನ್ನಾಗಿ ಮಾತನಾಡಿದ್ರು ಅವರು. ಭೀಮೆ ಬತ್ತಿ ಹೋಗಿದೆ ಎಂದು ಹೇಳ್ತಾರೆ, ಆದರೆ ಅವರು ಉಕ್ಕಿ ಹರಿಯುತ್ತಿದೆ ಎಂದು ಹೇಳುತ್ತಾರೆ. ಬಹುಶಃ ಶಿವಾನಂದ ಪಾಟೀಲರು ಇತ್ತೀಚೆಗೆ ಆ ಕಡೆಗೆ ಹೋಗಿಲ್ಲವೆಂದೆನಿಸುತ್ತದೆ. ಭೀಮದ ಸಮಸ್ಯೆಗಳಿವೆ, ಕೃಷ್ಣ ಸಮಸ್ಯೆಗಳಿವೆ, ಕಾವೇರಿ ಸಮಸ್ಯೆಗಳಿವೆ, ಆದರೆ crux the table ಇರೋ ಭೀಮಾ ಸಮಸ್ಯೆಯನ್ನು ನಾವು ಅವರು ಸೇರಿ ಬಿಡಿಸಲಿಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ವಿರೋಧ ಪಕ್ಷದವರ ಸಹಕಾರವನ್ನು ಕೋರುತ್ತೇನೆ. ವಿರೋಧ ಪಕ್ಷಗಳ ಸಹಕಾರವನ್ನು ಕೋರುತ್ತೇನೆ. ಈ ಕುಡಿಯುವ ನೀರಿನ ವ್ಯೆವಸ್ಥೆ ನಮ್ಮ ರಾಜ್ಯಕ್ಕೆ ಬಜಾವತ್ ಆಯೋಗದ ಜಾಕಟ್ಟಿನಲ್ಲಿ ನ್ಯಾಯ ಸಮ್ಮತವಾಗಿ ಬರಬೇಕಾಗಿರುವಂಥ ನೀರಿನ ಪಾಲನ್ನು ಸಂಪೂರ್ಣವಾಗಿ ಜೀರ್ಣಿಸಿಕೊಳ್ಳುವಂಥ ದಿಕ್ಕಿನಲ್ಲಿ ಅದನ್ನು ನಾವು ಆದರ್ಶವನ್ನಾಗಿ ಇಟ್ಟುಕೊಂಡು ನಾವು ಮುಂದುವರೆಯಬೇಕಾಗುತ್ತದೆ. ಆ ಒಂದು ಕಾರಣ ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಇಲ್ಲಿ ಇದ್ದಿದ್ದರೆ ಅವರನ್ನೂ ನಾನೂ ಮನಸಾರೆ ಅಭಿನಂದಿಸುತ್ತಿದ್ದೆ. ಇಷ್ಟು ದಿವಸಗಳ ಕಾಲ ಪರಸ್ಪರ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ಒಬ್ಬರನ್ನೊಬ್ಬರನ್ನೂ ಸಹಿಸಿದ್ದೇವೆ. ಅದೇ ಪ್ರಜಾಪ್ರಭುತ್ವದ ಮೆರುಗಿಗೆ the Majesty of parliament ಏನು ಎಂದು ಹೇಳಿದರೆ ಒಬ್ಬರನ್ನೊಬ್ಬರು ಸಹಿಸತಕ್ಕಂಥದ್ದು mutual co-existence ಎನ್ನತಕ್ಕಂಥದ್ದು. ನೀವು ನಮ್ಮನ್ನು ಅಳಿಸಿಬಿಡುವುದಕ್ಕಾಗುವುದಿಲ್ಲ ಅಥವಾ ನಾವು ನಿಮ್ಮನ್ನು ಅಳಿಸಿಬಿಡುವುದಕ್ಕಾಗುವುದಿಲ್ಲ. ಅದ್ದರಿಂದ ಒಬ್ಬರು ಇನ್ನೊಬ್ಬರ ಔಚಿತ್ಯವನ್ನು ಗಮನಕ್ಕೆ ತೆಗೆದುಕೊಂಡು ನಾವು ನಮ್ಮ ನಡವಳಿಕೆಗಳನ್ನು ನಡೆಸಬೇಕಾಗಿದೆ. ಮಾನ್ಯ ಪಾಟೀಲರು ಹಿರೀಕರೂ, ಸಿಂಧ್ಯಾರವರು ಅನುಭವಿಗಳು ಮತ್ತು ನಮ್ಮಲ್ಲಿಯೂ ಸಹ ಬಹಳ ಜನ ಅನುಭವಿ ಶಾಸಕರುಗಳಿದ್ದಾರೆ. ನಾವುಗಳೆಲ್ಲಾ ಒಟ್ಟಿಗೆ ಸೇರಿ ಈ ಸಲ ಇನ್ನೂ ಗಂಭೀರವಾದಂಥ ಡಿಬೇಟ್, ಮಾಡಬೇಕಾಗಿದೆ, ಕ್ವಾಲಿಟಿ ಆಫ್ ಡಿಬೇಟಿಂಗ್, ನಾನು ಮೇಲ್ಮನೆಯಲ್ಲಿ ಒಂದು ರಿಮಾರ್ಕ್‌ನ್ನು ಮಾಡಿದೆ ಕೆಲವು ಭಾಷಣಗಳನ್ನು ಕೇಳಿದಾಗ. ಅದೇ ಒಂದು ರಿಮಾರ್ಕ್ ಈ ಸಭೆಗೂ ಕೂಡ ಅಪ್ಲಿಕಬಲ್ ಆಗುತ್ತದೆ. ಏನು ಎಂದು ಹೇಳಿದರೆ ಕೆಲವು ಮಾನ್ಯ ಸದಸ್ಯರುಗಳು ಮಾಡಿದಂಥ ಭಾಷಣ ನಮ್ಮನ್ನು ಜಾಗೃತರನ್ನಾಗಿ ಮಾಡುತ್ತದೆ. ಅಂಥ ವಿಚಾರಗಳನ್ನು ಅವಲಂಬಿಸಿರುತ್ತದೆ. ಅಂಥ ವಿಚಾರಗಳನ್ನು ಒಳಗೊಂಡಿರುತ್ತದೆ. ಅದುದರಿಂದ ಈ ಸದನವನ್ನು ಇಷ್ಟು ಸುಲಲಿತವಾಗಿ ಸಮಾಧಾನ ತರತಕ್ಕಂಥ ರೀತಿಯಲ್ಲಿ ನಡೆಸಲಿಕ್ಕೆ ಮಾನ್ಯ ಅಧ್ಯಕ್ಷರೆ, ತಾವು ಕೊಟ್ಟಂಥ ಯೋಗ್ಯ ಮಾರ್ಗದರ್ಶನ ತಾವು ಕೊಟ್ಟಂಥ ನಮ್ಮ ಗೈಡ್‌ಲೈ ಏನಿದೆ ಹಾಗೇನೇ ವಿರೋಧ ಪಕ್ಷದ ನಾಯಕರು, ಹಾಗೇನೇ ಜನತಾ ಪರಿವಾರದ ನಾಯಕರು, ಇವರುಗಳೆಲ್ಲರೂ ಮತ್ತು ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಹಾಗೂ ಪಕ್ಷೇತರ ಸದಸ್ಯರುಗಳು, ಉಚ್ಚಾಟಿತ ಸದಸ್ಯರುಗಳು ಮತ್ತು ಪಕ್ಷೇತರ ಸದಸ್ಯರುಗಳು, ಎಲ್ಲರಿಗೂ ಕೂಡ ನಾನು ನನ್ನ ಪರವಾಗಿ ಸಭಾ ನಾಯಕನಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ :ಬರಗಾಲದ ಬಗ್ಗೆ ಹೇಳಬೇಕು.

ಶ್ರೀ ಎಸ್.ಎಂ.ಕೃಷ್ಣ : ಕೇಂದ್ರ ಸರ್ಕಾರದ ಕಡೆಗೆ ನಾರೂ ನೋಡ್ತಾ ಇದ್ದೇವೆ. ಅವರು ಹದಿನೈದನೇ ತಾರೀಖು ಲೆಕ್ಕ ಹೇಳಿ ಗಡುವು ಕೊಟ್ಟಿದ್ದಾರೆ. ನಾವೂ ಹದಿನೈದನೇ ತಾರೀಖಿನ್ನೇ ಕಾಯುತ್ತಾ ಇದ್ದೇವೆ. ಅಲ್ಲಲ್ಲೀ, ಅಲ್ಲಲ್ಲೀ ಸ್ವಲ್ಪ ಸ್ವಲ್ಪ ಮಳೆ ಆಗ್ತಾ ಇದೆ ಎನ್ನತಕ್ಕಂಥ ಮಾತುಗಳು ನಮಗೆ ಕೇಳಿಬರ್ತಾ ಇದೆ. ಕೇಳಿಬಂದಿದೆ. ಏಕೆಂದರೆ ಇವೊತ್ತು ನಮ್ಮ ಮಾನ್ಯ ಸದಸ್ಯರಾದ

ಯಾವಗಲ್‌ರವರು ಅವರು ಹೇಳಿದರು, ಅವರೂರಿನಲ್ಲಿ ಒಂದೇ ದಿವಸ 15 ಸೆಂ.ಮೀ.ಮಳೆಯಾಗಿ ಒಬ್ಬ ಬಾಲಕ ಕೊಚ್ಚಿಕೊಂಡು ಹೋದನಂತೆ, ಐವತ್ತು ಕುರಿ ಹೋಯಿತಂತೆ. ಆದ್ದರಿಂದ ಇಂಥ ಸಮಾಚಾರಗಳು ಬರ್ತವೆ. ಆದ್ದರಿಂದ ಒಂದು ಕಡೆ ಪ್ರವಾಹ, ಈಗ ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಳೆ ಬೀಳ್ತಾ ಇದೆ ಎಂದು ಹೇಳುತ್ತಾರೆ. ಬರ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವುದಕ್ಕೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೂಡ ಶಾಸನಸಭಾ ಸದಸ್ಯರುಗಳು ಅಧ್ಯಕ್ಷತೆಯಲ್ಲಿ ನಾವು ಒಂದು ಸಮಿತಿಗಳನ್ನು ಮಾಡಿ ಆ ಸಮಿತಿ ಈ ಬರಪರಿಹಾರ ಕೆಲಸ ಕಾರ್ಯಗಳನ್ನು ಮುಂದೆ ಕೈಗೆತ್ತಿಕೊಳ್ಳಲಿಕ್ಕೆ ಸಹಾಯಕ ಆಗಲಿ ಎನ್ನತಕ್ಕಂಥ ಉದ್ದೇಶದಿಂದ ನಾವು ಆ ಸಮಿತಿಗಳನ್ನು ಅತಿ ಸೀಘ್ರದಲ್ಲಿಯೇ ಮಾಡುತ್ತೇವೆ. ಹದಿನೈದನೇ ತಾರೀಖು ಆದಮೇಲೆ ಸನ್ನಿವೇಶಗಳ ಅನುಸಾರ ಕೇಂದ್ರ ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಿ ಅವರು ಕೊಡತಕ್ಕಂಥ ಫುಡ್‌ಗ್ರೈನ್ಸ್ ಯಾವ ಪ್ರಮಾಣದಲ್ಲಿರುತ್ತದೆ ಎನ್ನುತಕ್ಕಂಥದ್ದನ್ನು ಸಂಯೋಜಿಸಿ ಒಂದು ಈ ಮುಂದಿನ ಕಠಿಣವಾದಂಥ ದಿನಗಳನ್ನು ಎದುರಿಸಲಿಕ್ಕೆ ನಾವು ನೀವು ಪ್ರಯತ್ನ ಮಾಡೋಣವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

(ಸದನವು ರಾತ್ರಿ ಎಂಟು ಗಂಟೆ ಐವತ್ತೆಂಟು ನಿಮಿಷಕ್ಕೆ ಅನಿರ್ದಿಷ್ಟ ಕಾಲಾವಧಿಯವರೆಗೆ ಮುಂದೂಡಲ್ಪಟ್ಟಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

21. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ತುಮಕೂರು ಜಿಲ್ಲೆಯಲ್ಲಿ ಪಡಿತರ ಚೀಟಿ ವಿತರಣೆ.

203 (1698)- ಶ್ರೀ.ಎಸ್.ಶಿವಣ್ಣ (ತುಮಕೂರು) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುಮಕೂರು ಜಿಲ್ಲೆಯಲ್ಲಿ ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ ಗುರುತಿಸಿದ ಕುಟಂಬಗಳು ಎಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು).

ಆ. ತುಮಕೂರು ಜಿಲ್ಲೆಯಲ್ಲಿ ಹಳದಿ ಕಾರ್ಡು ವಿತರಿಸಲು ಸರ್ವೆ ಮಾಡಲಾಗಿದೆಯೇ. ಸರ್ವೆ ಕಾಲದಲ್ಲಿ ಗುರುತಿಸಲಾದ ಬಿ.ಪಿ.ಎಲ್.ಕುಟುಂಬಗಳೆಷ್ಟು

ಇ. ತುಮಕೂರು ನಗರದಲ್ಲಿ ಸ್ಲಂ ಪ್ರದೇಶಗಳಲ್ಲಿ ಬಿ.ಪಿ.ಎಲ್.ಹಳದಿ ಕಾರ್ಡು ವಿತರಿಸಲು ಸರ್ವೆ ಮಾಡಲಾಗಿದೆಯೇ?ಅರ್ಹ ಕುಟಂಬಗಳೆಷ್ಟು?

ಈ. ತುಮಕೂರು ನಗರಕ್ಕೆ ಹೊಸದಾಗಿ ಸೇರ್ಪಡೆಯಾದ 22 ಹಳ್ಳಿಗಳನ್ನು ಹಳದಿ ಕಾರ್ಡು ವಿತರಣೆ ಯೋಜನೆ ವ್ಯಾಪ್ತಿಯಲ್ಲಿ ಸರ್ವೆ ಮಾಡಲು ಸೇರಿಸಿಕೊಳ್ಳಲಾಗಿದೆಯೇ. ಇಲ್ಲವಾದಲ್ಲಿ ಕಾರಣವೇನು? ತೆಗೆದುಕೊಂಡ ಕ್ರಮಗಳೇನು? ಹೌದಾದಲ್ಲಿ ಅರ್ಹ ಕುಟುಂಬಗಳು ಎಷ್ಟು?

ಉ. ತುಮಕೂರು ನಗರದಲ್ಲಿರುವ ಹರಿಜನ:ಗಿರಿಜನ ಕಾಲೋನಿಗಳಿಗೆ ಹಳದಿ ಕಾರ್ಡುಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆಯೇ? ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ. ತುಮಕೂರು ಜಿಲ್ಲೆಯಲ್ಲಿ ಅಂತ್ಯೋದಯ ಅನ್ನ ಯೋಜನೆಯಡಿ 17624 ಕುಟುಂಬಗಳನ್ನು ಗುರುತಿಸಲಾಗಿದ್ದು ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ: